ಶ್ರೀ ಸಿ.ಟಿ.ರವಿ, ಮಾನ್ಯ ಕರ್ನಾಟಕ ವಿಧಾನ ಪರಿಷತ್ ಸದಸ್ಯರು ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ **"ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಗೌರವಧನ ಹೆಚ್ಚಿಸುವ ಕುರಿತು" ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರ ಉತ್ತರ**

## ಉತ್ತರ :

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ, 2ನೇ ಅಕ್ಟೋಬರ್ 1975 ರಂದು ಪ್ರಾಯೋಗಿಕವಾಗಿ ಮೈಸೂರು ಜಿಲ್ಲೆಯ, ಟಿ. ನರಸೀಪುರ ತಾಲ್ಲೂಕಿನಲ್ಲಿ 100 ಅಂಗನವಾಡಿ ಕೇಂದ್ರಗಳೊಂದಿಗೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಾಯಿತು. ಈಗ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸಲಾಗಿದೆ. 6 ವರ್ಷದ ಒಳಗಿನ ಮಕ್ಕಳ, ಗರ್ಭಿಣಿ, ಬಾಣಂತಿ ಮತ್ತು ಕಿಶೋರಿಯರ ಸರ್ವತೋಮುಖ ಅಭಿವೃದ್ಧಿಯು ಈ ಯೋಜನೆಯ ಮುಖ್ಯ ಗುರಿಯಾಗಿರುತ್ತದೆ.

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ರಾಜ್ಯದ 204 ಯೋಜನೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, 69919 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ರಾಜ್ಯದಲ್ಲಿ 66315 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 58443 ಸಹಾಯಕಿಯರು ಕಾರ್ಯನಿರ್ವಹಿಸುತ್ತಿದ್ದಾರೆ.

| ಅಂಗನವಾಡಿ ಕಾರ್ಯಕರ್ತೆಯರಿಗೆ ವರ್ಷವಾರು ಹೆಚ್ಚಿಸಲಾದ ಗೌರವಧನದ ವಿವರ (ರೂ.ಗಳಲ್ಲಿ) | | | | |
|---|---|---|---|---|
| **ವರ್ಷ** | **ಕೇಂದ್ರದ ಪಾಲಿನ ಗೌರವ ಧನ** | **ರಾಜ್ಯದ ಪಾಲಿನ ಗೌರವ ಧನ** | **ರಾಜ್ಯ ಸರ್ಕಾರದಿಂದ ಹೆಚ್ಚುವರಿ ಅನುದಾನ** | **ಒಟ್ಟು ಗೌರವಧನ** |
| 2013-14 | 2700 | 300 | 2000 | **5000** |
| 2014-15 | 2700 | 300 | 2500 | **5500** |
| 2015-16 | 1800 | 1200 | 3000 | **6000** |
| 2016-17 | 1800 | 1200 | 3000 | **6000** |
| 2017-18 | 1800 | 1200 | 5000 | **8000** |
| 2018-19 | 2700 | 1800 | 5000 | **9500** |
| 2019-20 | 2700 | 1800 | 5500 | **10000** |

| ಅಂಗನವಾಡಿ ಸಹಾಯಕಿಯರಿಗೆ ವರ್ಷವಾರು ಹೆಚ್ಚಿಸಲಾದ ಗೌರವಧನದ ವಿವರ (ರೂ.ಗಳಲ್ಲಿ) | | | | |
|---|---|---|---|---|
| **ವರ್ಷ** | **ಕೇಂದ್ರದ ಪಾಲಿನ ಗೌರವ ಧನ** | **ರಾಜ್ಯದ ಪಾಲಿನ ಗೌರವ ಧನ** | **ರಾಜ್ಯ ಸರ್ಕಾರದಿಂದ ಹೆಚ್ಚುವರಿ ಅನುದಾನ** | **ಒಟ್ಟು ಗೌರವಧನ** |
| 2013-14 | 1350 | 150 | 1000 | **2500** |
| 2014-15 | 1350 | 150 | 1250 | **2750** |
| 2015-16 | 900 | 600 | 1500 | **3000** |
| 2016-17 | 900 | 600 | 1500 | **3000** |
| 2017-18 | 900 | 600 | 2500 | **4000** |
| 2018-19 | 1350 | 900 | 2500 | **4750** |
| 2019-20 | 1350 | 900 | 2500 | **4750** |

2022-23ನೇ ಸಾಲಿನಿಂದ ರಾಜ್ಯ ಸರ್ಕಾರವು ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಸೇವಾ ಆಧಾರದ ಮೇರೆಗೆ 20 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದವರಿಗೆ ರೂ.1500/-, 10 ರಿಂದ 20 ವರ್ಷ ಸೇವೆ ಸಲ್ಲಿಸಿದವರಿಗೆ ರೂ.1250/- ಹಾಗೂ 10 ಕ್ಕಿಂತ ಕಡಿಮೆ ವರ್ಷಗಳ ಸೇವೆ ಸಲ್ಲಿಸಿದವರಿಗೆ ರೂ.1000/-ಗಳ ಗೌರವಧನವನ್ನು ಹೆಚ್ಚಿಸಲು ಆದೇಶಿಸಿದೆ. ಅದರಂತೆ, ಪ್ರಸ್ತುತ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಈ ಕೆಳಕಂಡಂತೆ ಗೌರವಧನ ನೀಡಲಾಗುತ್ತಿದೆ.

| **ಹುದ್ದೆ** | **ಕೇಂದ್ರ ಸರ್ಕಾರ ನಿಗದಿಪಡಿಸಿರುವ ಗೌರವಧನ** | **ಕೇಂದ್ರದ ಪಾಲು (60%)** | **ರಾಜ್ಯದ ಪಾಲು (40%)** | **ರಾಜ್ಯ ಸರ್ಕಾರದಿಂದ ನೀಡಲಾಗುತ್ತಿರುವ ಹೆಚ್ಚುವರಿ ಗೌರವಧನ** | **ಒಟ್ಟು** | **0-10 ವರ್ಷಗಳ ಸೇವೆ ಸಲ್ಲಿಸಿದವರಿಗೆ (ರೂ.1000)** | **10-20 ವರ್ಷಗಳ ಸೇವೆ ಸಲ್ಲಿಸಿದವರಿಗೆ (ರೂ.1250/-)** | **20 ವರ್ಷಗಳಿಗಿಂತ ಹೆಚ್ಚು ವರ್ಷಗಳ ಸೇವೆ ಸಲ್ಲಿಸಿದವರಿಗೆ (ರೂ.1500/-)** |
|---|---|---|---|---|---|---|---|---|
| ಅಂಗನವಾಡಿ ಕಾರ್ಯಕರ್ತೆ | 4500 | 2700 | 1800 | 5500 | 10000 | 11000 | 11250 | 11500 |
| ಅಂಗನವಾಡಿ ಸಹಾಯಕಿಯರು | 2250 | 1350 | 900 | 3000 | 5250 | 6250 | 6500 | 6750 |

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಹಂತ-ಹಂತವಾಗಿ ರಾಜ್ಯ ಸರ್ಕಾರದಿಂದ ಗೌರವಧನವನ್ನು ಹೆಚ್ಚಿಸಲಾಗಿರುತ್ತದೆ. 2025-26ನೇ ಸಾಲಿನ ಆಯವ್ಯಯದ ಕಂಡಿಕೆ-159ರಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ.1000/- ಹಾಗೂ ಅಂಗನವಾಡಿ ಸಹಾಯಕಿಯರಿಗೆ ರೂ.750 ಗಳನ್ನು ಹೆಚ್ಚಿಸಿ ಘೋಷಿಸಲಾಗಿದೆ. ಅದರನ್ವಯ ಒಂದು ವರ್ಷಕ್ಕೆ ವಾರ್ಷಿಕ ರೂ.144.73 ಕೋಟಿಗಳ ಅನುದಾನ ಹೆಚ್ಚುವರಿಯಾಗಿ ಗೌರವಧನ ಪಾವತಿಗಾಗಿ ಅಗತ್ಯವಿರುತ್ತದೆ.

**ಸಂಖ್ಯೆ: ಮಮಇ 109 ಐಸಿಡಿ 2024**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.